International Journal of Kannada Research
www.kannadajournal.com

**ISSN: 2454–5813**
IJKR 2020; 6(1): 31-34
© 2020 IJKR
www.kannadajournal.com
Received: 19-11-2019
Accepted: 21-12-2019

**ಶಾಭೋದ್ದೀನ.ಎಮ್.ಮುಗಳಿಕಟ್ಟಿ**
ಸಂಶೋಧನಾ ವಿದ್ಯಾರ್ಥಿ
ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ,
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ –580003

**ಡಾ. ವಾಮದೇವ ಹೆಚ್. ಟಿ**
ಸಂಶೋಧನಾ ಮಾರ್ಗದರ್ಶಕರು
ಕರ್ನಾಟಕ ಕಲಾ ಮಹಾವಿದ್ಯಾಲಯ,
ಕನ್ನಡ ಅಧ್ಯಯನ ವಿಭಾಗ,
ಧಾರವಾಡ– 580 003

**Corresponding Author:**
**ಶಾಭೋದ್ದೀನ.ಎಮ್.ಮುಗಳಿಕಟ್ಟಿ**
ಸಂಶೋಧನಾ ವಿದ್ಯಾರ್ಥಿ
ಡಾ.ಆರ್.ಸಿ.ಹಿರೇಮಠ ಕನ್ನಡ ಅಧ್ಯಯನ ಪೀಠ,
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ –580003

# ಮುಂಡಗೋಡ ತಾಲೂಕಿನ ವೀರಗಲ್ಲುಗಳಲ್ಲಿ ಆಯುಧಗಳು

**ಶಾಭೋದ್ದೀನ.ಎಮ್.ಮುಗಳಿಕಟ್ಟಿ, ಡಾ. ವಾಮದೇವ ಹೆಚ್. ಟಿ**

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಸಂಶೋಧನಾ ವಿದ್ಯಾರ್ಥಿಯಾದ ನಾನು "ಮುಂಡಗೋಡ ತಾಲೂಕು:ಸಾಂಸ್ಕೃತಿಕ ಅಧ್ಯಯನ" ಎಂಬ ವಿಷಯದ ಮೇಲೆ ಸಂಶೋಧನೆಯನ್ನು ಕೈಗೊಂಡಿದ್ದು ಸಂಶೋಧನೆಗೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯ ಕೈಗೊಂಡ ಸಂದರ್ಭದಲ್ಲಿ ತಾಲೂಕಿನ ಅನೇಕ ಹಳ್ಳಿಗಳಿಗೆ ಬೇಟಿ ನೀಡಿರುತ್ತೇನೆ. ಈ ಸಮಯದಲ್ಲಿ ಶಾಸನ ವಿಷಯಕ್ಕೆ ಪೂರಕವಾಗಿ ಪಶ್ನಾವಳಿಯನ್ನು ರಚಿಸಿಕೊಂಡು ಪ್ರಶ್ನೆಗಳನ್ನು ಕೇಳಿ ವಕ್ತೃಗಳಿಂದ ಉತ್ತರ ಪಡೆದು ಮಾಹಿತಿ ಸಂಗ್ರಹಿಸಿರುತ್ತೇನೆ. ಅಷ್ಟೇ ಅಲ್ಲದೇ ದೇವಾಲಯ, ವೀರಗಲ್ಲು, ಶಾಸನ, ಮಾಸ್ತಿಗಲ್ಲು, ಕೋಟೆ ಮೊದಲಾದ ಐತಿಹಾಸಿಕ ಕುರುಹಗಳ ಛಾಯಾಚಿತ್ರ, ಶಾಸನಗಳ ಪರಿಶೀಲನೆ, ಸ್ಮಾರಕಶಿಲ್ಪಗಳ ವೀಡಿಯೋ ಮೊದಲಾದ ಕಾರ್ಯವನ್ನು ಕೈಗೊಂಡಿರುತ್ತೇನೆ. ಈ ನಿಟ್ಟಿನಲ್ಲಿ ಮುಂಡಗೋಡ ತಾಲೂಕಿನ ನಂದಿಕಟ್ಟಾ, ಕೊಪ್ಪ, ಬಸನಾಳ, ಯರೇಬೈಲ್, ಇಂದೂರ, ಬೇಡಸಗಾಂವ, ಮಳಗಿ, ಪಾಳಾ, ಗುಂಜಾವತಿ, ಮೈನಳ್ಳಿ, ಕುರ್ಲಿ, ಮಲವಳ್ಳಿ, ಚವಡಳ್ಳಿ, ಹಿರಳ್ಳಿ, ಉಗ್ಗಿನಕೇರಿ, ಬಾಳೆಹಳ್ಳಿ ಮೊದಲಾದ ಪ್ರದೇಶಗಳಲ್ಲಿ ದೊರಕಿರುವ ವೀರಗಲ್ಲುಗಳ ಬಗ್ಗೆ ಮಾಹಿತಿ ಕಲೆಹಾಕಲಾಯಿತು. ನಾಡಿನ ಸಾಂಸ್ಕೃತಿಕ ಮತ್ತು ಐತಿಹಾಸಿಕ ಪರಂಪರೆಯನ್ನು ಹೊತ್ತ ಈ ವೀರಗಲ್ಲುಗಳಲ್ಲಿ ಬಳಕೆಗೊಂಡ ಆಯುಧಗಳ ಕುರಿತ ಸಂಕ್ಷಿಪ್ತ ಮಾಹಿತಿಯನ್ನು ಈ ಸಂಶೋಧನಾ ಲೇಖನದಲ್ಲಿ ತಿಳಿಸಲಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಪೂರ್ವದ ಅಂಚಿನಲ್ಲಿರುವ ಮುಂಡಗೋಡ ತಾಲೂಕು ಅರೆಮಲೆನಾಡು ಪ್ರದೇಶವಾಗಿದ್ದು ಕಿರುಗುಡ್ಡ, ಬೆಟ್ಟ ಮತ್ತು ಮಧ್ಯದಲ್ಲಿ ಸ್ವಲ್ಪ ಇಳಿಜಾರು ಪ್ರದೇಶದಿಂದ ಕೂಡಿದೆ. ಸುಮಾರು 94 ಹಳ್ಳಿಗಳಿಂದ ಕೂಡಿದ ಈ ತಾಲೂಕು ಸಾಹಿತ್ಯ, ಕಲೆ, ಸಂಸ್ಕೃತಿಯನ್ನು ತನ್ನ ಗರ್ಭದಲ್ಲಿರಿಸಿಕೊಂಡು ಐತಿಹಾಸಿಕ ಪರಂಪರೆ ಸಾರುವಂತಿದೆ.

ಒಂದು ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಕೈಗೊಳ್ಳುವಾಗ ನಾವು ಆಯಾಕಾಲ ನಮಗಾಗಿ ಬಿಟ್ಟುಹೋದ ಕುರುಹುಗಳು ಮೂಲ ಆಕರಗಳಾಗಿ ಪರಿಣಮಿಸುತ್ತವೆ. ಈ ವಿಷಯ ಮುಂಡಗೋಡ ತಾಲೂಕಿಗೂ ಸಹ ಹೊರತಾಗಿಲ್ಲವೆಂದು ಹೇಳಬಹುದು. ಸಾಹಿತ್ಯ, ಶಾಸನಗಳು ದೇವಾಲಯಗಳು, ಜನಪದ ಸಾಹಿತ್ಯ, ಕೋಟೆ–ಕೊತ್ತಲಗಳು ಸಂಸ್ಕೃತಿಯ ಪ್ರತೀಕಗಳಾಗಿವೆ. ಕನ್ನಡ ನಾಡಿನಲ್ಲಿ ದಾನ–ಧರ್ಮ ಮತ್ತು ವೀರಮೌಲ್ಯಗಳು ಬಹು ಮಹತ್ವದ ಸ್ಥಾನ ಪಡೆದುಕೊಂಡು ಅವು ಪ್ರಾಚೀನ ಕಾಲದಿಂದಲೂ ಜನಜೀವನದ ಅವಿಭಾಜ್ಯ ಅಂಗಗಳಾಗಿದ್ದವು. ಪ್ರಾಚೀನ ಕನ್ನಡ ಕಾವ್ಯಗಳಲ್ಲೂ ಆ ಮೌಲ್ಯಗಳ ಛಾಯೆ ದಟ್ಟವಾಗಿರುವುದನ್ನು ಕಾಣುತ್ತೇವೆ. ಕನ್ನಡ ನಾಡಿನ ಜನರು "ಇಯ್ಯುವುವುದು ಮತ್ತು ಇರಿಯುವುದು" ಇವುಗಳಲ್ಲಿ ಅತ್ಯಂತ ಮುಂದುವರೆದವರಾಗಿದ್ದರು. ಅನಾಥರಿಗೆ, ದುರ್ಬಲರಿಗೆ, ದು:ಖಿತರಿಗೆ, ಅಭಾವವಿದ್ದವರಿಗೆ, ಬೇಡಿದವರಿಗೆ, ಸಹಾಯ ಮಾಡಲು ಮುಂದಾಗುವರು. ಹಾಗೆಯೇ ಮೌಲ್ಯಕ್ಕೆ ತೊಂದರೆಯಾದಾಗ ಅದನ್ನು ಪರಿಹರಿಸುವುದಕ್ಕಾಗಿ ಆಯುಧ ಹಿಡಿದು ಹೋರಾಡಲು ಹಿಂದೆ ಮುಂದೆ ನೋಡದ ಜನರು ಇವರಾಗಿದ್ದರು. ದಾನಗುಣ ಸತ್ವವು ಕನ್ನಡಿಗರ ರಕ್ತವಾದಂತೆ ವೀರ ಗುಣದ ಸತ್ವವು ಅವರ ರಕ್ತದಲ್ಲಿ ಬೆರೆತ ಶಕ್ತಿಯ ಅಂಶವಾಗಿದ್ದಿತು. ಈ ವಿಷಯಕ್ಕೆ ಮುಂಡಗೋಡ ತಾಲೂಕೂ ಸಹ ಹೋರತಾಗಿಲ್ಲವೆಂದು ಇಲ್ಲಿಯ ವೀರಗಲ್ಲುಗಳಿಂದ ತಿಳಿದು ಬರುತ್ತದೆ.

ಆತ್ಮ ರಕ್ಷಣೆ ಹೋರಾಟಕ್ಕೆ ಬಳಸುವ ಸಾಧನಗಳು ಮಾನವ ಜೀವನ ಸಂಕೀರ್ಣವಾದಂತೆಲ್ಲ ಆತ್ಮರಕ್ಷಣೆಯ ಮತ್ತು ಹೋರಾಟದ ಅಂಶಗಳು ಜಟಿಲವಾಗಿ ಹಾಗೂ ಅದಕ್ಕೆ ತಕ್ಕಂತೆ ಆಯುಧಗಳು ಮಾರ್ಪಡುತ್ತಾ ಬಂದಿವೆ. ಆದಿಮಾನವನಿಂದ ಆಧುನಿಕ ಮಾನವನವರೆಗೆ ಅವನ ಜೊತೆಯಲ್ಲಿ ಉಳಿದು ಬಂದಿರುವ ಅಗತ್ಯ ವಸ್ತುಗಳಲ್ಲಿ ಆಯುಧಗಳಿಗೆ ಅಗ್ರಪ್ರಾಶಸ್ತ್ಯ. ಏಕೆಂದರೆ ಇವು ಆಹಾರವನ್ನೊದಗಿಸುವ,

ಶತ್ರುಬಾಧೆಯನ್ನು ನಿವಾರಿಸುವ, ಆತ್ಮರಕ್ಷಣೆಯನ್ನು ಮಾಡುವ ಸಾಧನಗಳಾಗಿವೆ. ಮೇಗಸ್ತನೀಸ್ ಭಾರತೀಯ ಯುದ್ಧಕ್ರಮವನ್ನು ಬಣ್ಣಿಸುತ್ತ ಆನೆಯ ಮೇಲೆ ಮೂರು ಜನ ಬಿಲ್ಲುಗಾರರು ಕುಳಿತು ಬಾಣ ಪ್ರಯೋಗ ಮಾಡುತ್ತಿದ್ದ ವಿಧವನ್ನು ವರ್ಣಿಸಿದ್ದಾನೆ. ಅರ್ರಿಯನ್ ಎಂಬುವವನು ಭಾರತೀಯ ವೀರರು ಅವರೆತ್ತರದ ಬಿಲ್ಲುಗಳನ್ನು ಬಳಸುತ್ತಿದ್ದರು ಎಂದು ಬಣ್ಣಿಸಿದ್ದಾನೆ. ಅಗ್ನಿಪುರಾಣ, ರಾಮಾಯಣ ಮತ್ತು ಮಹಾಭಾರತದಲ್ಲಿ ಆಯುಧಗಳ ಉಲ್ಲೇಖವಿದೆ. ಭಾರತೀಯ ಸಂಸ್ಕೃತಿಯಲ್ಲಿ , ಕರ್ನಾಟಕದಲ್ಲಿ ಆಯುಧ ಪೂಜೆಯಂತೂ ಒಂದು ವಿಶಿಷ್ಟ ಆಚರಣೆಯಾಗಿ ಬೆಳೆದುಬಂದಿದ್ದು, ಇಂತಹ ಆಚರಣೆ ಮುಂಡಗೋಡ ತಾಲೂಕಿನ ಜನಜೀವನದಲ್ಲಿಯೂ ಹಾಸುಹೊಕ್ಕಾಗಿದೆ. ಮನುವಿನ ಕಾಲಕ್ಕೆಲ್ಲ ಕಬ್ಬಿಣ ಬಳಕೆಗೆ ಬಂದಿತ್ತು. ಬರ್ಚಿ, ಖಡ್ಗ, ಗುರಾಣಿ, ಕತ್ತಿ, ಬಿಲ್ಲುಬಾಣ, ಬಾಕು ಮೊದಲಾದ ಆಯುಧಗಳು ಮುಂಡಗೋಡ ತಾಲೂಕಿನ ವೀರಗಲ್ಲುಗಳಲ್ಲಿ ಕಂಡುಬರುತ್ತವೆ. ಬೆತ್ತದಿಂದ ತಯಾರಿಸಿದ ಬಿಲ್ಲುಗಳ ತುದಿಯಲ್ಲಿ ಕಬ್ಬಿಣದ ಕೊರಲುಗಳುಳ್ಳ ಬಾಣಗಳು ಭಾರತೀಯರ ಬಳಿ ಇದ್ದವೆಂದು ಗ್ರೀಕ್ ಚರಿತ್ರೆಕಾರ ಹೇರಾಡೇಟಸ್ ತಿಳಿಸಿದ್ದಾನೆ.

ಪ್ರಾಚೀನ ಕರ್ನಾಟಕದ ಸಾಮಾಜಿಕ ಮೌಲ್ಯಗಳಲ್ಲಿ ಚಾಗದಷ್ಟೇ ವೀರಗುಣವು ಪ್ರಮುಖವಾಗಿತ್ತು. ಸಂಪಾದಿಸಿದ ಹಣವನ್ನು ಉದಾರವಾಗಿ ದಾನ ಮಾಡಬೇಕು, ಯುದ್ಧದಲ್ಲಿ ಧೈರ್ಯದಿಂದ ಹೋರಾಡಬೇಕು ಇವೆರಡು ಪ್ರಾಚೀನ ಕಾಲದ ಆದರ್ಶಗಳು. ತಾಳಗುಂದ ಶಾಸನದಲ್ಲಿ ಮಯೂರವರ್ಮನ ಕುರಿತು, ಬಾದಾಮಿ ಶಾಸನದಲ್ಲಿ ಕಪ್ಪೆಅರೆಭಟ್ಟನ ಶೌರ್ಯಸ್ವಾಭಿಮಾನಗಳ ಕುರಿತು ವಿವರಗಳಿವೆ. ಹೂಯೆನ್‌ತ್ಸಾಂಗ್‌ನು ಕನ್ನಡಿಗರನ್ನು ಹೊಗಳುತ್ತಾ ಅವರಿಗೆ ಅಪಮಾನವಾದರೆ ಪ್ರಾಣ ಹೋದರೂ ಸರಿಯೇ ಸೇಡನ್ನು ತೀರಿಸಿಕೊಳ್ಳದೇ ಬಿಡರೆಂದೂ, ಶತ್ರುವಿಗೆ ಎಚ್ಚರಕೊಟ್ಟು ಇರಿಯುವರೆಂದು ಹೇಳುತ್ತಾನೆ. ರಾಜಶೇಖರನು ವಿದ್ಧಶಾಲಭಂಜಿಕಾದಲ್ಲಿ ಯುದ್ಧದಲ್ಲಿ ಕನ್ನಡಿಗರು ಸ್ವಭಾವತ ಶೂರರು ಎಂದು ಮುಕ್ತಕಂಠದಿಂದ ಪ್ರಶಂಶಿಸಿದ್ದಾನೆ.

ವೀರಗಲ್ಲುಗಳು ಕನ್ನಡ ನಾಡಿನ ಶಾಸನಗಳ ಒಂದು ವೈಶಿಷ್ಟ್ಯವೆಂದು ಹೇಳಬಹುದು. ದಾನಶಾಸನ ಬಿಟ್ಟರೆ ಸಂಖ್ಯೆಯಲ್ಲಿ ವೀರಗಲ್ಲುಗಳದೇ ಎರಡನೇ ಸ್ಥಾನ. ಕನ್ನಡಿಗರು ಮೊದಲಿನಿಂದಲೂ ಶೂರರಾಗಿದ್ದರೆಂಬುದಕ್ಕೆ ಇತಿಹಾಸದ ಸಹಸ್ರಾರು ಪುಟಗಳು ಸಾಕ್ಷಿಯಾಗಿವೆ. ಜಯಶಾಲಿಯಾದರೆ ಲಕ್ಷ್ಮೀ ಲಭಿಸುತ್ತಾಳೆ, ಮೃತನಾದರೆ ಸುರಾಂಗನೆಯರು ಲಭಿಸುತ್ತಾರೆ, ನಿಮಿಷದಲ್ಲಿ ಅಳಿಯುವ ಈ ದೇಹಕ್ಕೆ ಕಾಳಗದಲ್ಲಿ ಅಳಿವೆನೆಂಬ ಕೋರೆಗೇಕೆ, ಇದು ಕನ್ನಡ ನಾಡಿನ ವೀರರ ಮಂತ್ರವಾಗಿತ್ತು ಅಂತಹ ವೀರಮರಣವನ್ನು ಘೋಷಿಸುತ್ತವೆ ಈ ವೀರಗಲ್ಲುಗಳು. ಮುಂಡಗೋಡ ತಾಲೂಕಿನ ಬೇಡಸಗಾಂವ ಎಂಬ ಊರಲ್ಲಿ 12ನೇ ಶತಮಾನದ ವೀರಗಲ್ಲೊಂದಿದ್ದು ಇದು ಕುಪ್ಪಗಾವುಂಡನೆಂಬ ವೀರನ ಮರಣವನ್ನು ತಿಳಿಸುತ್ತದೆ. ಸಾಮಾನ್ಯವಾಗಿ ವೀರಗಲ್ಲುಗಳು ಮೂರು ಹಂತಗಳನ್ನು ಒಳಗೊಂಡಿದ್ದು, ಕೆಳ ಹಂತದಲ್ಲಿ ವೀರ ತನ್ನ ಶತ್ರುಗಳೊಡನೆ ಹೋರಾಡುತ್ತಿರುವಂತೆಯೂ, ಮಧ್ಯದ ಹಂತದಲ್ಲಿ ಯುದ್ಧದಲ್ಲಿ ಮಡಿದ ವೀರನನ್ನು ದೇವತಾಸ್ತ್ರೀಯರು ಸ್ವರ್ಗಕ್ಕೆ ಕೊಂಡೊಯ್ಯುವಂತೆಯೂ, ಮೇಲಿನ ಹಂತದಲ್ಲಿ ವೀರನು ಭಗವಂತನ ಸಾನಿಧ್ಯದಲ್ಲಿ ಇರುವಂತೆಯೂ ಕೆತ್ತಲಾಗಿರುತ್ತದೆ. ಇನ್ನು ಕೆಲವು ವೀರಗಲ್ಲುಗಳು ಐದು ಆರು ಹಂತಗಳನ್ನು ಹೊಂದಿರುತ್ತವೆ. ಕೆಲ ವೀರಗಲ್ಲುಗಳು ಮಧ್ಯಮಧ್ಯ ಬರಹವನ್ನು ಹೊಂದಿದ್ದರೆ ಇನ್ನು ಕೆಲವು ಶಿಲ್ಪವನ್ನು ಮಾತ್ರ ಹೊಂದಿರುತ್ತವೆ. ಹೀಗೆ ಮುಂಡಗೋಡ ತಾಲೂಕಿನ ಬೇರೆ ಬೇರೆ ಪ್ರದೇಶಗಳಲ್ಲಿ ದೊರಕಿರುವ, ವೀರಗಲ್ಲು, ಹುಲಿಬೇಟೆ, ತುರುಗೊಳ್, ಪಣ್‌ಬ್ಯುಯಲ್ ಮೊದಲಾದ ಶಾಸನಶಿಲ್ಪಗಳಲ್ಲಿ ಆಯುಧಗಳ ನೋಟವನ್ನು ಈ ಲೇಖನ ಒಳಗೊಂಡಿದೆ.

**ಬಿಲ್ಲು,ಬಾಣ**

ಧನುರ್ವಿದ್ಯೆಯಲ್ಲಿ ಪ್ರವೀಣರಾಗಿದ್ದರ ಅನೇಕರ ಹೆಸರುಗಳು ಶಾಸನಗಳಲ್ಲಿ ಕಂಡುಬರುತ್ತದೆ. ಹಾರುವ ಹದ್ದಿನ ಕಣ್ಣಿಗೆ ಗುರಿಯಿಡುವ ಕುಶಲ ಧನುರ್ಧರ ವೈಜರಸ ಎಂಬುವನೊಬ್ಬನಿದ್ದನು, ಧನುರ್ವಿದ್ಯೆಯಲ್ಲಿ ಪ್ರಾಚೀನ ಕನ್ನಡಿಗರು ಪಡೆದಿದ್ದ ಪರಿಣಿತಿಗೆ ಇದು ಅತ್ಯುತ್ತಮ ನಿದರ್ಶನವಾಗಿದೆ. ಬಿಲ್ಲನ್ನು ತಾಳವೃಕ್ಷದಿಂದ ಮತ್ತು ಬೊಂಬಿನಿಂದ (ಬಿದಿರು) ಮಾಡುತ್ತಿದ್ದರೆಂದು ಕಾಣುತ್ತದೆ. ಪಂಪಭಾರತದಲ್ಲಿ ತಾಳವಟ್ಟದ ಬಿಲ್ಲಿನ ಹೆಸರಿದೆ. ಬಾಣವನ್ನು ಚುಚ್ಚುವ ಆಯುಧಗಳಲ್ಲಿ ಸೇಪರ್ಡೆ ಮಾಡಿದ್ದು ಶಾಸನ ಮತ್ತು ಕಾವ್ಯಗಳಲ್ಲಿ ಇದರ ಉಲ್ಲೇಖವಿದೆ. ಮುಂಡಗೋಡ ತಾಲೂಕಿನ ಯರೆಬೈಲ್ ಗ್ರಾಮದಲ್ಲಿ ಗೌಳಿಗರ ಸ್ಮಶಾನದ ಸಮೀಪ ಕಾಡಿನಲ್ಲಿ ತುರುಗೊಳ್ ಪ್ರಕಾರದ ವೀರಗಲ್ಲೊಂದರಲ್ಲಿ ವೀರನು ಆಳೆತ್ತರದ ಬಿಲ್ಲುಬಾಣ ಹಿಡಿದು ಹೋರಾಡು ದೃಶ್ಯವಿದೆ. ಕುರ್ಲಿಯ ವೀರಗಲ್ಲಿನಲ್ಲಿ ವೀರ ತನ್ನ ಬಾಣದಿಂದ ವೈರಿಯ ಸೈನಿಕನನ್ನು ಘಾಸಿಗೊಳಿಸಿದ್ದು ಆಕರ್ಶಕವಾಗಿದೆ. ಚಳಗೇರಿಯಲ್ಲಿನ ವೀರಗಲ್ಲಿನಲ್ಲಿ ವೀರನು ಬಿಟ್ಟ ಬಾಣದಿಂದ ಘಾಸಿಗೊಂಡ ವೈರಿಪಡೆಯ ಕುದುರೆ ತನ್ನ ಮುಖ ಹಿಂದಕ್ಕೆ ಸರಿಸಿಕೊಂಡಿದೆ. ಮುಂಡಗೋಡ ಗ್ರಾಮದ ಹನುಮಾನ ದೇವಾಲಯದ ಸಮೀಪದ ವೀರಗಲ್ಲಿನಲ್ಲಿ ವೀರರುಹಿಡಿದ ಬಾಣಗಳು ಅಲಂಕರಣೆಯಿಂದ ಕೂಡಿವೆ. ಗುಂಜಾವತಿಯ ತುರುಗೋಳ್ ವೀರಗಲ್ಲಿನಲ್ಲಿ ವೀರನ ಎತ್ತರಕ್ಕೆ ಸರಿಸಮನಾದ ಬಾಣವಿದೆ. ಮೈನಳ್ಳಿಯಲ್ಲಿಯ ವೀರಗಲ್ಲೊಂದರಲ್ಲಿ ವೈರಿಪಡೆಯ ಸೈನಿಕನ ಕೈಯಲ್ಲಿ ಬಾಣ ಪ್ರಯೋಗಗೊಂಡಿದೆ. ನಂದಿಕಟ್ಟಾದಲ್ಲಿನ ವೀರಗಲ್ಲೊಂದರಲ್ಲಿ ವೀರನು ತನ್ನ ಕಾಲಲ್ಲಿ ವೈರಿಸೈನಿಕನನ್ನು ಮೆಟ್ಟಿನಿಂತು ಕುದುರೆ ಏರಿ ಬರುತ್ತಿರುವ ವೈರಿಗೆ ಬಾಣ ಬಿಡುವ ದೃಶ್ಯವಿದೆ. ವೀರನು ಮೊಣಕಾಲೂರಿ ವೈರಿಪಡೆಯ ಸೈನಿಕನನ್ನು ಮೆಟ್ಟಿ ವೈರಿ ಪಡೆಯ ಕುದುರೆ ಮುಖಕ್ಕೆ ಬಿಟ್ಟ ಬಾಣದ ಹೊಡೆತದಿಂದ ಕುದುರೆ ಘಾಸಿಗೊಂಡು ತನ್ನ ಮುಖ ಹಿಂದಕ್ಕೆ ಚಾಚಿದ ದೃಶ್ಯ ಮಲವಳ್ಳಿಯ ವೀರಗಲ್ಲೊಂದರಲ್ಲಿ ಕಂಡುಬರುತ್ತದೆ.

**ಬರ್ಚಿ**

ಈ ಆಯುಧ ನಾಲ್ಕು ಅಡಿಯಿಂದ ಆರು ಅಥವಾ ಏಳು ಅಡಿಗಳವರೆಗೆ ಉದ್ದವಿರುತ್ತದೆ. ಮುಂಬಾಗ ಬಹಳ ಹರಿತವಾಗಿ ಚೂಪಾಗಿರುತ್ತದೆ. ಇದನ್ನು ಶತ್ರುಗಳಿಗೆ ಅಥವಾ ಕ್ರೂರ ಪ್ರಾಣಿಗಳನ್ನು ತಿವಿಯಲು ಬಳಸುತ್ತಿದ್ದರು. ಇದರಲ್ಲಿ ಸೂಜಿ ಬರ್ಚಿ ಮತ್ತು ಎಲೆಬರ್ಚಿ ಎಂದು ಕಾಣಬಹುದು. ಸೂಜಿಯಂತೆ ಇದ್ದರೆ ಸೂಜಿ ಬರ್ಚಿ ಎಂದೂ, ಎಲೆಯ ಆಕಾರದಲ್ಲಿದ್ದರೆ ಎಲೆ ಬರ್ಚಿ ಎಂದೂ ಕರೆಯುವರು. ಬೇಟೆಗಾಗಿ ಬಳಸುವ ಈ ಉದ್ದವಾದ ಸಾಧನಗಳ ತುದಿಯಲ್ಲಿ ಮೊನಚಾದ, ಚೂಪಾದ ಲೋಹದ ಭಾಗವಿರುತ್ತದೆ. ತಿವಿಯಲು ಬಳಸುವ ಬರ್ಚಿಗಳು ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಈಗಲೂ ಉಳಿದಿವೆ. ಬೇಡಸಗಾಂವದಲ್ಲಿನ ವೀರಗಲ್ಲೊಂದರಲ್ಲಿ ವೀರನ ಸಹಪಾಠಿ ಮತ್ತು ವೈರಿಸೈನಿಕರ ಕೈಯಲ್ಲಿ ಬರ್ಚಿಗಳಿವೆ. ವೈರಿ ಪಡೆಯ ನಾಯಕ ಕೈಯಲ್ಲಿರುವ ಬರ್ಚಿ ತುಂಬಾ ಉದ್ದವಾಗಿದೆ. ಗುಂಜಾವತಿಯ ತುರುಗೋಳ್ ವೀರಗಲ್ಲೊಂದರಲ್ಲಿ ವೈರಿ ಸೈನಿಕ ಕೈಯಲ್ಲಿ ಉದ್ದವಾದ ಬರ್ಚಿ ಇದೆ. ಇಲ್ಲಿಯ ಇನ್ನೊಂದು ಶಿಲ್ಪದಲ್ಲಿ ವೈರಿ ಸೈನಿಕ ತನ್ನ ಕೈಯಲ್ಲಿಯ ಬರ್ಚಿಯಿಂದ ವೀರನ ತಲೆಗೆ ಪ್ರಹಾರ ಮಾಡುವ ದೃಶ್ಯವಿದೆ. ಮೈನಳ್ಳಿ ಮತ್ತು ನಂದಿಕಟ್ಟಾ ಶಾಸನಶಿಲ್ಪದಲ್ಲಿಯೂ ಬರ್ಚಿ ಹಿಡಿದ ದೃಶ್ಯಗಳಿವೆ. ಕಲಕಿಕಾರೆ ವೀರಗಲ್ಲೊಂದರಲ್ಲಿ ವೀರ ತನ್ನ

ಉದ್ದನೇಯ ಬರ್ಚಿಯಿಂದ ವೈರಿ ಸೈನಿಕನ ಉದರಕ್ಕೆ ಇರಿದಿದ್ದು ಅಸ್ಪಷ್ಟವಾಗಿ ಗೋಚರಿಸುತ್ತದೆ.

**ಬಾಕು**

ಆಯುಧಗಳಲ್ಲಿ ಬಾಕು ಅತಿ ಚಿಕ್ಕ ಗಾತ್ರದಾಗಿರುತ್ತದೆ. ಇದನ್ನು ಸೊಂಟದಲ್ಲಿ ಹಾಕಿಕೊಂಡು ಹೋರಾಡುವ ವೀರರ ದೃಶ್ಯಗಳು ಶಾಸನದುದ್ದಕ್ಕೂ ಕಂಡುಬರುತ್ತವೆ. ಇಂತಹ ಆಯುಧ ಮುಂಡಗೋಡ ತಾಲೂಕಿನ ವಿವಿದ ಗ್ರಾಮಗಳಲ್ಲಿ ಕಂಡುರುವ ಶಾಸನಶಿಲ್ಪಗಳಲ್ಲಿ ಬಳಕೆಗೊಂಡಿವೆ. ಕುರ್ಲಿಯ ವೀರಗಲ್ಲೊಂದರಲ್ಲಿ ವೀರನ ಸೊಂಟದಲ್ಲಿರುವ ಬಾಕು ಗಾತ್ರದಲ್ಲಿ ಸ್ವಲ್ಪ ಉದ್ದವಾಗಿದೆ. ಬಾಕುವನ್ನು ಹಾಕಿಕೊಳ್ಳಲು ಸೊಂಟಕ್ಕೆ ವಿಶಿಷ್ಟವಾದ ಪಟ್ಟಿ ಕಟ್ಟಿರುವುದು ಕಂಡುಬರುತ್ತದೆ. ಮೈನಳ್ಳಿಯ ಶಾಸನವೊಂದರಲ್ಲಿ ಗಂಡುಗಚ್ಚೆ ಧರಿಸಿದ ವೀರನ ಸೊಂಟದಲ್ಲಿ ಚೂಪಾದ ಬಾಕು ಇದ್ದು ಕುಚ್ಚ ಸ್ಪಷ್ಟವಾಗಿ ಕಂಡುಬರುತ್ತದೆ. ಇಲ್ಲಿಯ ಇನ್ನೊಂದು ಶಿಲ್ಪದಲ್ಲಿ ವೀರನ ಬಾಕು ಗಾತ್ರದಲ್ಲಿ ಚಿಕ್ಕದಾಗಿದ್ದು ಸ್ವಲ್ಪ ಅಗಲವಾಗಿದ್ದು ವೀರನ ಕಚ್ಚೆಯ ಕುಚ್ಚ ಕಾಲಲ್ಲಿ ಬಿದ್ದ ವೈರಿ ಸೈನಿಕನ ತಲೆಗೆ ಹತ್ತಿದಂತೆ ಖಂಡರಿಸಲಾಗಿದೆ. ಕಲಕಿಕಾರೆ ಶಾಸನಶಿಲ್ಪವೊಂದರಲ್ಲಿ ವೀರ ಮತ್ತು ಆತನ ಸಹಚರರು ಬಾಕು ಧರಿಸಿದ್ದು ಗೋಚರಿಸುತ್ತದೆ. ವೈರಿ ಸೈನಿಕನನ್ನು ಮೆಟ್ಟಿ ಹೋರಾಡುತ್ತಿರುವ ವೀರನ ಬಾಕು ಸಪೂರವಾಗಿದ್ದು ಕಟ್ಟಿದ ಕುಚ್ಚ ಏಳೆಯಾಗಿ ಕೆಳಗೆ ಇಳಿಬಿದ್ದಿದೆ. ಚವಡಳ್ಳಿಯ ಶಿಲ್ಪವೊಂದರಲ್ಲಿ ವೀರ ಮತ್ತು ಆತನ ಹಿಂದಿನ ಸಹಪಾಠಿಗಳ ಬಾಕುಗಳ ಮೇಲೆ ಉದ್ದನೇಯ ಗೆರೆಗಳಿದ್ದು ಹಿಡಿಕೆಗಳು ತುಂಬಾ ಆಕರ್ಶಕವಾಗಿವೆ. ಬೇಡಸಗಾಂವದಲ್ಲಿನ ವೀರಗಲ್ಲುಗಳಲ್ಲಿ ಬಾಕುಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಮಳಗಿ, ನಂದಿಕಟ್ಟಾ, ಮಲವಳ್ಳಿ, ಮುಂಡಗೋಡ, ಯರರಬೈಲ್ ಮೊದಲಾದ ಊರಿನಲ್ಲಿ ದೊರೆತ ಶಾಸನಶಿಲ್ಪಗಳಲ್ಲಿ ಬಾಕುಗಳು ಕಂಡುಬರುತ್ತವೆ. ಬಾಕುಗಳನ್ನು ವೀರಯೋಧರು ಎದೆಯನ್ನು, ಹೊಟ್ಟೆಯನ್ನು ಸೀಳಲು ಬಳಸುತ್ತಿದ್ದು ವೀರರ ಜೊತೆಗೆ ಸರ್ವಕಾಲಿಕವಾಗಿ, ಸದಾಕಾಲ ಇರುವ ಆಯುಧ ಇದಾಗಿದ್ದು ಇದನ್ನು ಇಟ್ಟುಕೊಳ್ಳಲು ಕವಚಗಳಿದ್ದವು. ವೀರ ಹೋರಾಡುವಾಗ ಕೈಯಲ್ಲಿದ್ದ ಖಡ್ಗ, ಗುರಾಣಿ, ಬರ್ಚಿ ಮೊದಲಾದ ಆಯುಧಗಳು ಕೈಜಾರಿ ಬಿದ್ದಾಗ ಸ್ವರಕ್ಷಣೆಗಾಗಿ ವೀರ ಬಾಕುವನ್ನು ಬಳಸುವ ರೀತಿ ಮಾರ್ಮಿಕವಾದುದ್ದು.

**ಖಡ್ಗ**

ಖಡ್ಗಕ್ಕೆ ಕರವಾಳ್ ಅಥವಾ ತೋಳಬಾಳ್ ಎಂದೂ ಹೆಸರುಗಳಿದ್ದವು. ಕತ್ತರಿಸುವ ಆಯುಧಗಳಲ್ಲಿ ಖಡ್ಗವು ಪ್ರಮುಖವಾದ ಆಯುಧವಾಗಿದೆ. ಖಡ್ಗ ಚಲಾವಣೆಯಲ್ಲಿ ಸೂಕ್ಷ್ಮ ಸಂಚಲನೆ, ಶೀಘ್ರಗತಿ, ಚುರುಕುತನ, ಏಕಾಗ್ರತೆ, ಶೌರ್ಯ–ಶಕ್ತಿ ಮೊದಲಾದ ಅಂಶಗಳಿರಬೇಕಾಗುತ್ತದೆ. ಖಡ್ಗದ ಹಿಡಿತ ಕಲಾತ್ಮಕವಾಗಿದ್ದು ಕೈಯಿಂದ ಜಾರಿಕೊಳ್ಳದಂತೆ ಮಡಿಕೆಗಳನ್ನು ಪಡೆದಿರುತ್ತದೆ. ಬೇಡಸಗಾಂವದ ವೀರಗಲ್ಲೊಂದರಲ್ಲಿ ವೀರನು ತನ್ನು ಖಡ್ಗದಿಂದ ವೈರಿ ಪಡೆಯ ಸೈನಿಕನ ಉದರಕ್ಕೆ ಇರಿದಿದ್ದು ಖಡ್ಗ ಬೆನ್ನಿನಲ್ಲಿ ಪಾರಾಗಿದ್ದು ಸ್ಪಷ್ಟವಾಗಿ ಗೋಚರಿಸುತ್ತದೆ. ಇಲ್ಲಿಯ ಇನ್ನೊಂದು ಶಿಲ್ಪದಲ್ಲಿ ವೀರ ಕುದುರೆ ಏರಿ ಖಡ್ಗ ಹಿಡಿದು ಹೋರಾಡುವ ದೃಶ್ಯವಿದೆ. ವೀರನೊಬ್ಬ ಮೊಣಕಾಲೂರಿ ತನ್ನ ಖಡ್ಗದಿಂದ ಹುಲಿಯ ಎದೆಗೆ ಇರಿದ ದೃಶ್ಯ ಇಲ್ಲಿಯ ಇನ್ನೊಂದು ಹುಲಿಬೇಟೆ ಶಿಲ್ಪದಲ್ಲಿ ಕಂಡುಬರುತ್ತದೆ. ಇಂದೂರಿನ ವೀರಗಲ್ಲೊಂದರಲ್ಲಿ ವೀರ ಹಿಡಿದಿರುವ ಖಡ್ಗ ತುಂಬಾ ಚಿಕ್ಕಗಾತ್ರದಾಗಿದೆ. ಗುಂಜಾವತಿಯ ಶಿಲ್ಪದಲ್ಲಿ ವೀರನು ತನ್ನ ಖಡ್ಗದಿಂದ ವೈರಿಯ ಉದರಕ್ಕೆ ಇರಿದಿದ್ದು ವೈರಿ ಸೈನಿಕ ಕಂಗಾಲಾಗಿ ತನ್ನೆರಡು ಕೈ ಮೇಲೆತ್ತಿದ ದೃಶ್ಯವಿದೆ. ಮೈನಳ್ಳಿಯಲ್ಲಿನ ಶಾಸನಶಿಲ್ಪದಲ್ಲಿ ತನ್ನ ಚಿಕ್ಕ ಖಡ್ಗದಿಂದ ವೀರ ಕುದುರೆ ಏರಿಬರುತ್ತಿರುವ ವೈರಿಯ ಕುದುರೆಯ ಕತ್ತಿಗೆ ಹೊಡೆದಿದ್ದು, ಘಾಸಿಗೊಂಡ ಕುದುರೆ ತನ್ನ ಮುಖ ಹಿಂದಕ್ಕೆ ಚಾಚಿದೆ. ವೀರ ತನ್ನ ಖಡ್ಗದಿಂದ ವೈರಿಪಡೆಯ ಹೊಟ್ಟೆಗೆ ಇರಿದಿದ್ದು ಖಡ್ಗದ ಭಾಗ ಬೆನ್ನಿನ ಮೂಲಕ ಪಾರಾಗಿದ್ದು ಕಂಡುಬರುತ್ತದೆ, ನಂದಿಕಟ್ಟಾ, ಪಾಳಾ, ಬಾಳೆಹಳ್ಳಿ, ಚವಡಳ್ಳಿ, ಮಲವಳ್ಳಿಯ ಶಾಸನಗಳಲ್ಲಿ ಖಡ್ಗಗಳು ಕಂಡುಬರುತ್ತವೆ.

**ಗುರಾಣಿ**

ಕೈಯಲ್ಲಿ ಹಿಡಿಯಲಾದ ಅಥವಾ ಮುಂಗೈ ಮೇಲೆ ಏರಿಸಲಾದ ವಯಕ್ತಿಕ ರಕ್ಷಾಕವಚದ ಒಂದು ತುಂಡು ಇದಾಗಿದೆ. ಖಡ್ಗ, ಬಾಣ, ಬರ್ಚಿಗಳಿಂದ ಹೊಡೆತವನ್ನು ತಡೆಯುವ ಪ್ರಮುಖ ಅಸ್ತ್ರವಾಗಿದೆ. ಗುರಾಣಿಗಳು ಗಾತ್ರದಲ್ಲಿ ಬಹುಮಟ್ಟಿಗೆ ಬದಲಾವಣೆ ಹೊಂದಿವೆ. ಪೂರ್ವೇತಿಹಾಸದಲ್ಲಿ ಅತ್ಯಂತ ಮೊದಲಿನ ನಾಗರಿಕತೆಗಳ ಯುಗದ ಅವಧಿಯಲ್ಲಿ ಗುರಾಣಿಗಳು ಕಟ್ಟಿಗೆ, ಪ್ರಾಣಿಚರ್ಮ ಹೆಣೆದ ಜೊಂಡು ಅಥವಾ ಬೆತ್ತದಿಂದ ತಯಾರಾಗುತ್ತಿದ್ದವು. ತದನಂತರ ಲೋಹದ ಬಳಕೆ ಕಂಡುಬರುತ್ತದೆ. ಇಂದೂರಿನ ಶಾಸನಶಿಲ್ಪದಲ್ಲಿ ವೀರ ಹಿಡಿದ ಗುರಾಣಿ ಗಾತ್ರದಲ್ಲಿ ತುಂಬಾ ದೊಡ್ಡದಿದ್ದು ಆಕರ್ಶಕವಾಗಿದೆ. ಮಳಗಿಯ ವೀರಗಲ್ಲೊಂದರಲ್ಲಿ ವೈರಿಪಡೆಯ ಕೈಯಲ್ಲಿರುವ ಗುರಾಣಿಗಳ ಮೇಲೆ ಪುಷ್ಪ ಅಲಂಕರಣೆ ಕಂಡುಬರುತ್ತದೆ. ಬೇಡಸಗಾಂವ ವೀರಗಲ್ಲೋಂದರಲ್ಲಿ ಇಡಿಯಾದ ಯುದ್ಧದ ದೃಶ್ಯ ಅವಲೋಕಿಸಿದಾಗ ಬಳಕೆಗೊಂಡ ಆಯುಧಗಳಲ್ಲಿ ಗುರಾಣಿಗಳ ಸಂಖ್ಯೆಯೇ ಅಧಿಕವಾಗಿದೆ. ಇಂದೂರಿನ ಶಿಲ್ಪದಲ್ಲಿ ವೀರನ ಸಹಪಾಠಿಗಳು ಹಿಡಿದ ಗುರಾಣಿಗಳು ಆಯಾತಾಕಾರಗಳಲ್ಲಿವೆ. ಮೈನಳ್ಳಿಯ ವೀರಗಲ್ಲೊಂದರಲ್ಲಿ ವೀರನ ಕೈಯಲ್ಲಿದ್ದ ಗುರಾಣಿ ದೊಡ್ಡದಿದ್ದು, ಉಳಿದವರ ಕೈಯಲ್ಲಿಯ ಗುರಾಣಿ ಚಿಕ್ಕಗಾತ್ರದಾಗಿದ್ದು ಅದರ ಮೇಲೆ ಚಿಕ್ಕ ಚಿಕ್ಕ ಬಿಂದುಗಳಿಟ್ಟಂತೆ ಅಲಂಕರಣೆ ಇದೆ. ನಂದಿಕಟ್ಟಾ ಮತ್ತು ಬಸನಾಳ ಶಾಸದಲ್ಲೂ ಗುರಾಣಿಗಳು ಬಳಕೆಗೊಂಡಿವೆ. ಚವಡಳ್ಳಿಯ ಶಿಲ್ಪವೊಂದರಲ್ಲಿ ವೀರನು ದೊಡ್ಡ ಗಾತ್ರದ ಗುರಾಣಿಯಿಂದ ವೈರಿ ಪಡೆಯ ಸೈನಿಕನ ಮುಖಕ್ಕೆ ಹೊಡೆದಿದ್ದು ಘಾಸಿಗೊಂಡ ಸೈನಿಕ ಮುಖ ಹಿಂದಕ್ಕೆ ಸರಿಸಿದಂತೆ ಖಂಡರಿಸಲಾಗಿದೆ.






ಛಾಯಾಚಿತ್ರಗಳು

**ಪರಾಮರ್ಶನ ಗ್ರಂಥಗಳು**


1. ಕಲಬುರ್ಗಿ.ಎಂ.ಎಂ – ಧಾರವಾಡ ಜಿಲ್ಲೆಯ ಶಾಸನ ಸೂಚಿ, 2008.
2. ಚಿದಾನಂದಮೂರ್ತಿ.ಎಂ – ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, 2011.
3. ಪರಮಶಿವಮೂರ್ತಿ.ಡಿ.ಎ – ಕನ್ನಡ ಶಾಸನಶಿಲ್ಪ, 1999.
4. ಶೇಷಶಾಸ್ತ್ರಿ.ಆರ್ – ಕರ್ನಾಟಕದ ವೀರಗಲ್ಲುಗಳು, 2004.
5. ತಿಪ್ಪೇರುದ್ರಸ್ವಾಮಿ. ಎಚ್ – ಕರ್ನಾಟಕದ ಸಂಸ್ಕೃತಿ ಸಮೀಕ್ಷೆ, 2015.
6. ಹೊನ್ನೂರಸ್ವಾಮಿ. ಹೆಚ್ – ಸ್ಮಾರಕ ಶಿಲ್ಪಗಳ ಅಧ್ಯಯನ, 2015.
7. ಕ್ಷೇತ್ರಕಾರ್ಯ ಕೈಗೊಂಡ ವರದಿಗಳು.